ಡಿ ಡಬ್ಲ್ಯೂ- 2

ಸಾಕ್ಷಿಯನ್ನು ದಿಃ 05-07-2019 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀಸವಾಲು ವಾದಿಗಳ ಪರ- ಶ್ರೀ ಎಸ್ ಜೆ ವಕೀಲರಿಂದಃ

ತಿಮ್ಮಣ್ಣ , ದಾಸಪ್ಪ, ಈರಪ್ಪ ಮ್ಯಾದನಹೊಳೆ ಗ್ರಾಮದ ವಾಸಿಗಳಾಗಿದ್ದು ಅವರು ಈರಜ್ಜನ ಮಕ್ಕಳು ಎಂದರೆ ಸರಿ. ಈರಜ್ಜನಿಗೆ ಮ್ಯಾದನಹೊಳೆ ಗ್ರಾಮದಲ್ಲಿ ಎಷ್ಟು ಸರ್ವೆ ನಂ ಗಳಲ್ಲಿ ಸ್ವತ್ತುಗಳು ಇದ್ದವು ಎಂದು ನನಗೆ ಗೊತ್ತಿಲ್ಲ . ಆದರೆ ಸರ್ವೆ ನಂ. 43 ರ ಬಗ್ಗೆ ಮಾತ್ರ ನನಗೆ ಗೊತ್ತು ಎಂದು ಉತ್ತರಿಸುತ್ತಾರೆ. ನಿಡಿ-1 ರ ದಾಖಲೆಯ ಪ್ರಕಾರ ಕೇವಲ ಸರ್ವೆ ನಂ. 43 ರ ಸ್ವತ್ತನ್ನು ಮಾತ್ರ ವಿಭಾಗ ಮಾಡಲಾಗಿದೆ. ಸರ್ವೆ ನಂ. 43 ರ ಒಟ್ಟು ವಿಸ್ತೀರ್ಣ ಎಷ್ಟು ಎಂದು ನನಗೆ ಗೊತ್ತಿಲ್ಲ. ಈರಜ್ಜನ ಮಕ್ಕಳಾದ ಈರಪ್ಪ , ದಾಸಪ್ಪ ಹಾಗೂ ತಿಮ್ಮಣ್ಣ ಈ ಹಿಂದೆ ಬಾಯಿ ಮಾತಿನಲ್ಲಿ ಸರ್ವೆನಂ. 43 ರ ಸ್ವತ್ತನು ವಿಭಾಗ ಮಾಡಿಕೊಂಡಿದ್ದರು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಅದು ತನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ.

ಈರಜ್ಜನ 2 ನೇ ಮಗ ದಾಸಪ್ಪನಿಗೆ ಇಬ್ಬರು ಹೆಣ್ಣುಮಕ್ಕಳು ಇದ್ದರು ಎಂದರೆ ಸಾಕ್ಷಿ ಆ ಬಗ್ಗೆ ನಾನು ಕೇಳಿದ್ದೇನೆ ಆದರೆ ನಾನು ಅವರನ್ನು ನೋಡಿಲ್ಲ ಎಂದು ಉತ್ತರಿಸುತ್ತಾರೆ. ನಾವು ಸ್ವತ್ತನ್ನುವಿಭಾಗ ಮಾಡಿಕೊಡುವಾಗ ಪಂಚಾಯತಿಯಲ್ಲಿ ದಾಸಪ್ಪನಿಗೆ ಮಕ್ಕಳಿದ್ದಾರೋ ಇಲ್ಲವೋ ಎನ್ನುವ ಬಗ್ಗೆ ವಿಚಾರ ಮಾಡಿಲ್ಲ. ನಿಮ್ಮ ಸಹೋದರ ದಾಸಪ್ಪನಿಗೆ ಮಕ್ಕಳಿದ್ದಾರೋ ಇಲ್ಲವೋ ಎಂದು ಪಾಲು ಮಾಡಲು ಸೇರಿದ ಪಂಚಾಯತಿಯಲ್ಲಿ ನಾವು ಈರಪ್ಪ ಹಾಗೂ ತಿಮ್ಮಣ್ಣನನ್ನು ಕೇಳಿಲ್ಲ. ನಾವು ಪಾಲು ಮಾಡಿಕೊಟ್ಟಾಗ ಸರ್ವೆ ನಂ. 43 ರ ಸ್ವತ್ತು ಯಾರ ಹೆಸರಿನಲ್ಲಿತ್ತು ಹಾಗೂ ಎಷ್ಟು ವಿಸ್ತೀರ್ಣದಲ್ಲಿತ್ತು ಎಂದು ಗೊತ್ತಿಲ್ಲ.

ಸಾಮಾನ್ಯವಾಗಿ ಯಾವುದೇ ಕುಟುಂಬದಲ್ಲಿ ಸ್ವತ್ತಿನ ಪಾಲು ಮಾಡಿಕೊಡಲು ಪಂಚಾಯತಿದಾರರು ಹೋದಾಗ ಆ ಕುಟುಂಬಕ್ಕೆ ಒಟ್ಟು ವಿಸ್ತೀರ್ಣದ ಸ್ವತ್ತು ಇದೆ ಎಂದು ಅದು ಯಾರ ಹೆಸರಿನಲ್ಲಿದೆ ಎಂದು ತಿಳಿದುಕೊಳ್ಳುತ್ತೇವೆ ಎಂದರೆ ಸರಿ. ನಾವು ಪಂಚಾಯತಿಯಲ್ಲಿ ಪಾಲು ಮಾಡಿಕೊಡುವಾಗ ಸರ್ವೆ ನಂ. 43 ರ ಸ್ವತ್ತಿನ ಪಹಣಿ ಪತ್ರಿಕೆಯನ್ನು ತರಿಸಿಕೊಂಡಿಲ್ಲ. ಆ ಸಮಯದಲ್ಲಿ ಸರ್ವೆ ನಂ. 43 ರ ಸ್ವತ್ತಿನ ಖಾತೆ ಯಾರ ಹೆಸರಿನಲ್ಲಿತ್ತು ಎನ್ನುವುದನ್ನು ನಾನು ತಿಳಿದುಕೊಂಡಿಲ್ಲ ಎಂದರೆ ಸಾಕ್ಷಿ ಅದು ಗಿರಿಯಪ್ಪನ ಹೆಸರಿನಲ್ಲಿತ್ತೆಂದು ಆದರೆ ಅವರ ಹೆಸರಿನಲ್ಲಿ ಎಷ್ಟು ವಿಸ್ತೀರ್ಣದ ಸ್ವತ್ತು ಇತ್ತು ಎಂದು ನನಗೆಗೊತ್ತಿಲ್ಲ ಎಂದು ಉತ್ತರಿಸುತ್ತಾರೆ.

ನಾವು ಸ್ವತ್ತನ್ನು ಹಂಚಿಕೆ ಮಾಡಿ ಕೊಡುವಾಗ ತಿಮ್ಮಣ್ಣನಿಗೆ ಪಾಲು ಕೊಟ್ಟಿಲ್ಲ. ಸಾಕ್ಷಿ ಮುಂದುವರೆದು ಮೊದಲೇ ಅವರಲ್ಲಿ ವಿಭಾಗವಾಗಿತ್ತು ಎಂದು ಉತ್ತರಿಸುತ್ತಾರೆ. ತಿಮ್ಮಣ್ಣನಿಗೆ ಸರ್ವೆ ನಂ. 43 ರಲ್ಲಿ ಇಂತಿಷ್ಟು ವಿಸ್ತೀರ್ಣದ ಸ್ವತ್ತು ಇತ್ತು ಎಂದು ನಿಡಿ-1 ರಲ್ಲಿ ಬರೆದಿಲ್ಲವೇ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಅದು ತನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಆ ದಿನ ಸರ್ವೆ ನಂ. 43 ರ ಸ್ವತ್ತನ್ನು ಗಿರಿಯಪ್ಪ ಹಾಗೂ ಆತನ ಮಕ್ಕಳಿಗೆ ಹಂಚಿಕೆ ಮಾಡಿಕೊಟ್ಟಿದ್ದೇವೆ. ಸಾಕ್ಷಿ ಮುಂದುವರೆದು ಭದ್ರಪ್ಪನಿಗೂ ಕೊಟ್ಟಿದ್ದೇವೆ ಎಂದು ಉತ್ತರಿಸುತ್ತಾರೆ. ಗಿರಿಯಪ್ಪ ಹಾಗೂ ಭದ್ರಪ್ಪ ಎಂದರೆ ಈರಜ್ಜನ 3 ನೇ ಮಗ ತಿಮ್ಮಣ್ಣನ ಮಕ್ಕಳು ಎಂದರೆ ಸರಿ.

ತಿಮ್ಮಣ್ಣನ ಪಾಲಿನ ಸ್ವತ್ತನ್ನು ನಾವು ಗಿರಿಯಪ್ಪನಿಗೂ ಭದ್ರಪ್ಪನಿಗೂ ಸಮನಾಗಿ ಹಂಚಿಕೊಟ್ಟಿದ್ದೇವೆ. ನಾವು ಹಂಚಿಕೆ ಮಾಡಿಕೊಟ್ಟ ದಿನ ಗಿರಿಯಪ್ಪನವರ ಹೆಸರಿನಲ್ಲಿ ಸರ್ವೆ ನಂ. 43 ರಲ್ಲಿ ಕೇವಲ 9 ಎಕರೆ 22 ಗುಂಟೆ ಜಮೀನು ಇತ್ತು ಎಂದರೆ ಸರಿ. ಆ 9 ಎಕರೆ 22 ಗುಂಟೆ ಜಮೀನನ್ನು ಗಿರಯಪ್ಪ ಹಾಗೂ ಆತನ ಮಕ್ಕಳಿಗೆ ಹಂಚಿಕೆ ಮಾಡಿಕೊಟ್ಟಿದ್ದೇವೆ. ಆ 9 ಎಕರೆ 22 ಗುಂಟೆ ಜಮೀನಿನಲ್ಲಿ ಭದ್ರಪ್ಪನಿಗೆ ನಾವು ಜಮೀನು ಹಂಚಿಕೆ ಮಾಡಿಕೂಟ್ಟಿಲ್ಲ.

ಸರ್ವೆ ನಂ. 43 ರಲ್ಲಿ ಈರಜ್ಜನ 2 ನೇ ಮಗ ದಾಸಪ್ಪನಿಗೆ 9 ಎಕರೆ 18 ಗುಂಟೆ ಜಮೀನು ಇತ್ತು ಎಂದರೆ ಸಾಕ್ಷಿ ಅದು ತನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಆ ವಿಭಾಗದಲ್ಲಿ ಈರಜ್ಜನ ಮಗ ಈರಪ್ಪನಿಗೆ ಸರ್ವೆ ನಂ. 43 ರಲ್ಲಿ ಪಾಲು ಹಂಚಿಕೆ ಮಾಡಿದ್ದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಅವರಲ್ಲಿ ಮೊದಲೇ ವಿಭಾಗವಾಗಿದ್ದು ಆ ದಿನ ಈರಪ್ಪನಿಗೆ ಸ್ವತ್ತು ವಿಭಾಗ ಮಾಡಿಲ್ಲ ಎಂದು ಉತ್ತರಿಸುತ್ತಾರೆ. ಸರ್ವೆ ನಂ. 43 ರಲ್ಲಿದ್ದ ಗಿರಿಯಪ್ಪನ ಹೆಸರಿನಲ್ಲಿದ್ದ 9 ಎಕರೆ 22 ಗುಂಟೆ ಜಮೀನಿನಲ್ಲಿ ಭದ್ರಪ್ಪನಿಗೆ ಸಮ ಪಾಲು ಇತ್ತು ಎಂದರೆ ಸರಿ. ಸರ್ವೆ ನಂ. 222/1 ರ ಸ್ವತ್ತನ್ನು ಈರಜ್ಜನ ಮಕ್ಕಳು ಬಾಯಿಮಾತಿನಲ್ಲಿ ವಿಭಾಗ ಮಾಡಿಕೊಂಡು ಅದನ್ನು ಮೊದಲೇ ಮಾರಾಟ ಮಾಡಿದ್ದರು ಎಂದರೆ ಸಾಕ್ಷಿ ಅದು ತನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ.

ಸರ್ವೆ ನಂ. 43 ರ ಸ್ವತ್ತನ್ನು ಗಿರಿಯಪ್ಪ ಹಾಗೂ ಆತನ ಮಕ್ಕಳಿಗೆ ಹಂಚಿಕೆ ಮಾಡಿಕೊಡುವಾಗ ಆ ಸ್ವತ್ತಿನಲ್ಲಿ ಭದ್ರಪ್ಪನಿಗೂ ಸಮ ಪಾಲು ಇರುವ ಬಗ್ಗೆ ನಾವು ಗಿರಿಯಪ್ಪನನ್ನು ಕೇಳಿದ್ದೇವೆ. ಭದ್ರಪ್ಪನಿಗೆ ಅದೇ ಸರ್ವೆ ನಂ. 43 ರಲ್ಲಿ ಬೇರೆ ಜಮೀನು ಕೊಟ್ಟಿದ್ದೇವೆ ಎಂದು ಗಿರಿಯಪ್ಪ ಹೇಳಿದ್ದರು. ಭದ್ರಪ್ಪನಿಗೆ ಕೊಟ್ಟ

ಜಮೀನು ಅವರ ತಂದೆ ತಿಮ್ಮಣ್ಣನಿಗೆ ಸೇರಿತ್ತು. ಭದ್ರಪ್ಪನಿಗೆ ಕೊಟ್ಟ ಜಮೀನು ಅವರ ತಂದೆ ತಿಮ್ಮಣ್ಣನಿಗೆ ಸೇರಿತ್ತು ಎಂದು ಹೇಳಲು ಆಗ ನಾವು ಯಾವುದೇ ದಾಖಲೆಯನ್ನು ನೋಡಿಲ್ಲ. ನಿಡಿ-1 ರ ಮೂಲಕ ಸರ್ವೆ ನಂ. 43 ರ ಸ್ವತ್ತನ್ನು ವಿಭಾಗ ಮಾಡಿಕೊಟ್ಟಿದ್ದೇವೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಗಿರಿಯಪ್ಪ ಹಾಗೂ ಆತನ ಮಕ್ಕಳು ಕರೆದಿದ್ದಕ್ಕೆ ಅವರು ಹೇಳಿದ ದಾಖಲೆಗೆ ಸಹಿ ಮಾಡಿಕೊಟ್ಟಿದ್ದು ವಿಭಾಗದ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ.

ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್‌ಸಿ ಹಿರಿಯೂರು.